International Journal of Applied Research 2018; 4(7): 111-118




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2018; 4(7): 111-118
www.allresearchjournal.com
Received: 20-05-2018
Accepted: 22-06-2018

**Dr. MS Durga Praveena**
Assistant Professor,
Department of Kannada Language and Translation Studies, Dravidian University, Srinivasa Vanam, Kuppam-517426, Chittor Dist, Andhra Pradesh, India

**Correspondence**
**Dr. MS Durga Praveena**
Assistant Professor,
Department of Kannada Language and Translation Studies, Dravidian University, Srinivasa Vanam, Kuppam-517426, Chittor Dist, Andhra Pradesh, India

# ಬಾಸೆಲ್ ಇವಾಂಜಲಿಕಲ್ ಮಿಶನ್‌ಗೆ ಸಂಬಂಧಪಟ್ಟ ಸಂಶೋಧನೆಗಳು: ಒಂದು ಸಮೀಕ್ಷೆ

**Dr. MS Durga Praveena**

ಪ್ರಸ್ತುತ ಪ್ರಬಂಧವು ಬಾಸೆಲ್ ಮಿಶನ್ ಬಗೆಗೆ ನಡೆದಿರುವ ಸಂಶೋಧನೆಗಳ ಸ್ವರೂಪವನ್ನು ಗಮನಿಸುತ್ತಾ ಮುಂದಿನ ಅಧ್ಯಯನಗಳಿಗೆ ಪೂರಕವಾಗಿರುವ ದಾಖಲೀಕರಣಗಳನ್ನು ನಿರ್ದಿಷ್ಟವಾಗಿ ಗುರುತಿಸುವ ಪ್ರಯತ್ನವಾಗಿದೆ. ಈ ಸಮೀಕ್ಷೆಯ ಫಲಿತವು ಮೂಲ ಆಕರಗಳ ಸಮಗ್ರ ಮತ್ತು ಸೂಕ್ಷ್ಮ ಅಧ್ಯಯನದ ಮೂಲಕ ರೂಪುಗೊಂಡಿದೆ. ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಮಂಗಳೂರಿನ ಬಾಸೆಲ್ ಮಿಶನ್‌ನ ಚಟುವಟಿಕೆಗಳು, ಕೊಡುಗೆಗಳ ಬಗೆಗಿನ ಹಲವು ನೇರವಾದ ಸಂಶೋಧನೆಗಳು ನಡೆದಿವೆ, ನಿರ್ದಿಷ್ಟ ಮಿಶನರಿಗಳ ಕುರಿತಾದ ಮಾಹಿತಿಪೂರ್ಣ ಪುಸ್ತಕಗಳು, ಲೇಖನಗಳು ಪ್ರಕಟವಾಗಿವೆ, ಬಾಸೆಲ್ ಮಿಶನ್‌ನ ಹಿನ್ನೆಲೆಯಲ್ಲಿ ನಿರ್ದಿಷ್ಟ ವಸ್ತು ವಿಚಾರವನ್ನಿರಿಸಿಕೊಂಡು ಸಂಶೋಧನಾತ್ಮಕ ಲೇಖನಗಳು, ಪುಸ್ತಕಗಳು ಪ್ರಕಟವಾಗಿವೆ, ಅದೇ ರೀತಿ ತುಳುವಿನ ಆಧುನಿಕಪೂರ್ವ ಸಾಹಿತ್ಯದ ನೆಲೆಗಟ್ಟಿನ ಸಂಶೋಧನೆಗೆ ಪೂರಕವಾಗಿ ಆಕರಶೋಧವೂ ನಡೆದಿದೆ.

ಇವುಗಳಲ್ಲಿ ಎಂ.ಫಿಲ್, ಪಿಎಚ್.ಡಿ ಅಧ್ಯಯನಗಳು, ಕ್ರೈಸ್ತ ದೈವಜ್ಞಾನ ಪದವಿಗಾಗಿ ನಡೆಸಲಾದ ಅಧ್ಯಯನಗಳು, ಸಾಂದರ್ಭಿಕ ಸ್ಮರಣೆಗಳು, ವೈಯಕ್ತಿಕ ಆಸಕ್ತಿಯ ಫಲವಾಗಿ ರೂಪುಗೊಂಡ ಬರವಣಿಗೆಗಳಿವೆ. ಇಲ್ಲಿ ಪ್ರಾಥಮಿಕ ಆಕರಗಳಿಂದ ಗಟ್ಟಿಯಾದ ಮಾಹಿತಿಗಳು ಹೊರಹೊಮ್ಮಿವೆ. ನಿರ್ದಿಷ್ಟವಾಗಿ 1834ರ ನಂತರದ ಈ ಕಾಲಘಟ್ಟದಲ್ಲಿ ಬಾಸೆಲ್ ಮಿಶನ್ ಹಿನ್ನೆಲೆಯಲ್ಲಿ ಯಾವುದೇ ವ್ಯಕ್ತಿ, ವಸ್ತು, ವಿಷಯದ ಬಗೆಗಿನ ಮಾಹಿತಿಪೂರ್ಣ ಬರವಣಿಗೆಗೂ ಸಂಶೋಧನೆ ಅತ್ಯಗತ್ಯವಾಗಿ ಬೇಕಾಗಿರುವುದು ವೈಶಿಷ್ಟ್ಯವಾಗಿದೆ. ಇವುಗಳನ್ನು ಒಂದೆಡೆಗೆ ದಾಖಲಿಸುವ ಕಾರ್ಯ ಆಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೆಟಿಸಿ ಪತ್ರಾಗಾರದಲ್ಲಿ ಲಭ್ಯವಿರುವ ಮಾಹಿತಿಗಳನ್ನನುಸರಿಸಿ ಪ್ರಾಥಮಿಕ ಹಂತದಲ್ಲಿ ಸಂಶೋಧನಾ ಬರವಣಿಗೆಗಳ ವಿವರಗಳನ್ನು ಕ್ರೋಢೀಕರಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಕನ್ನಡ, ತುಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬಂದ ಬರವಣಿಗೆಗಳನ್ನು ಮುಖ್ಯವಾಗಿ ಗಮನಿಸಲಾಗಿದೆ. ಹಲವು ಲೇಖನ, ಪುಸ್ತಕಗಳಲ್ಲಿ ಸಾಂದರ್ಭಿಕವಾಗಿ ಬಾಸೆಲ್ ಮಿಶನ್ ಪ್ರಸ್ತಾಪವು ಬರುತ್ತಿದ್ದು ಅದನ್ನಿಲ್ಲಿ ಪೂರಕವಾಗಿ ಉಲ್ಲೇಖಿಸಲಾಗಿದೆ. ಇವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಿಕೊಳ್ಳಲಾಗಿದೆ:

1. **ಎಂ.ಫಿಲ್, ಪಿಎಚ್.ಡಿ ಅಧ್ಯಯನಗಳು:** ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿ ಪದವಿಗಾಗಿ ನಡೆದಿರುವ ಸಂಶೋಧನೆಗಳು.
2. **ಕ್ರೈಸ್ತದೈವಜ್ಞಾನ ಪದವಿಗಾಗಿ ಸಲ್ಲಿಸಲಾದ ಸಂಪ್ರಬಂಧಗಳು:** ಮಂಗಳೂರಿನ ಕರ್ನಾಟಕ ಥಿಯೊಲಾಜಿಕಲ್ ಕಾಲೇಜು ಹಾಗೂ ಬೆಂಗಳೂರಿನ ಯುನೈಟೆಡ್ ಥಿಯೊಲಾಜಿಕಲ್ ಕಾಲೇಜುಗಳಲ್ಲಿ ಬಿ.ಡಿ. (ಬ್ಯಾಚುಲರ್ ಆಫ್ ಡಿವಿನಿಟಿ) ಪದವಿಗಾಗಿ ಸಲ್ಲಿಸಲಾಗಿರುವ ಸಂಪ್ರಬಂಧಗಳು.
3. **ಸ್ನಾತಕೋತ್ತರ ಪದವಿಯ ಆಂಶಿಕ ಅವಶ್ಯಕತೆಗಾಗಿ ಸಲ್ಲಿಸಲಾದ ಪ್ರಬಂಧಗಳು:** ದೇಶ, ವಿದೇಶಗಳಲ್ಲಿ ಸ್ನಾತಕೋತ್ತರ ಪದವಿಯ ಆಂಶಿಕ ಅವಶ್ಯಕತೆಗಾಗಿ ಸಲ್ಲಿಸಲಾದ ಪ್ರಬಂಧಗಳು.
4. **ಪೂರಕ ಕೃತಿಗಳು:** ಬಾಸೆಲ್ ಮಿಶನ್, ಬಾಸೆಲ್ ಮಿಶನರಿಗಳು, ಮಿಶನರಿಗಳ ಕಾರ್ಯಗಳು ತತ್ಸಂಬಂಧೀ ಸಂಶೋಧನಾತ್ಮಕ ವಿಚಾರಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒಳಗೊಂಡ ಕೃತಿಗಳು.

5. **ಲೇಖನಗಳು:** ಸ್ಮರಣ ಸಂಚಿಕೆಗಳು ಅಥವಾ ನೆನಪಿನ ಸಂಪುಟಗಳು, ಚರ್ಚ್ ಸ್ಮರಣ ಸಂಚಿಕೆಗಳು, ಸಾಂದರ್ಭಿಕ ಸ್ಮರಣ ಗ್ರಂಥಗಳು, ಕನ್ನಡ ಸಾಹಿತ್ಯ ಸಮ್ಮೇಳನಗಳು, ತುಳು ಸಮ್ಮೇಳನಗಳು, ಅಭಿನಂದನ ಗ್ರಂಥಗಳು ಮೊದಲಾದವುಗಳಲ್ಲಿ ಪ್ರಕಟವಾಗಿರುವ ಸಂಶೋಧನಾ ನೆಲೆಗಟ್ಟಿನ ಲೇಖನಗಳು.

**ಎಂ.ಫಿಲ್, ಪಿಎಚ್.ಡಿ ಅಧ್ಯಯನಗಳು**

ಕನ್ನಡ ಭಾಷಿಕ ಪ್ರದೇಶಗಳಲ್ಲದೆ ಅವಿಭಜಿತ ದಕ್ಷಿಣ ಕನ್ನಡ ಹಾಗೆಯೇ ವಿಶಾಲವಾದ ತುಳುನಾಡಿಗೆ ಸಂಬಂಧಪಟ್ಟಂತೆ ಬಾಸೆಲ್ ಇವಾಂಜಲಿಕಲ್ ಮಿಶನ್‌ನ ಕಾರ್ಯ ಬಹು ದೊಡ್ಡದು. ಈ ಕುರಿತಾದ ಸಂಶೋಧನೆಗಳಲ್ಲಿ ಎಂ.ಫಿಲ್, ಪಿಎಚ್.ಡಿ ಅಧ್ಯಯನಗಳನ್ನು ಗಮನಿಸಿದಾಗ ಚರಿತ್ರೆ, ಸಾಹಿತ್ಯ, ಪತ್ರಿಕೋದ್ಯಮ ದೈವಜ್ಞಾನ ಹೀಗೆ ಹಲವು ಶಿಸ್ತುಗಳಲ್ಲಿ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಮಂಗಳೂರು ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಲ್ಲಿ ಡಾಕ್ಟರೇಟ್ ಪದವಿಗಾಗಿ ಸಲ್ಲಿಸಲಾದ ಪೀಟರ್ ವಿಲ್ಸನ್ ಪ್ರಭಾಕರ ಅವರ 'The Basel Mission in South Kanara (1834–1947)' ಈ ಕ್ಷೇತ್ರದಲ್ಲಿ ಮೊದಲ ಪಿಎಚ್.ಡಿ ಅಧ್ಯಯನ (1988) ಅನೇಕ ಮಹತ್ವದ ಮಾಹಿತಿಗಳನ್ನು ಒಳಗೊಂಡಂತಹ ಸಂಶೋಧನೆ. ಇದು ಅಪ್ರಕಟಿತ. ಇದರ ಸಂಕ್ಷಿಪ್ತ ರೂಪವು ಕನ್ನಡದಲ್ಲಿ 'ದಕ್ಷಿಣ ಕನ್ನಡದಲ್ಲಿ ಬಾಸೆಲ್ ಮಿಷನ್' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ (1989).

ಕೆ.ಎಂ.ಮ್ಯಾಥ್ಯೂ ಅವರು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮೂಲಕ ನಡೆಸಿದ ಪಿಎಚ್.ಡಿ ಅಧ್ಯಯನ(1990) 'ರೆವೆ.ಎಫ್.ಕಿಟೆಲ್–ಒಂದು ಸಮಗ್ರ ಅಧ್ಯಯನ' ನಂತರ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ.

ಮಹೀದಾಸ ಬಿ.ವಿ. ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮೂಲಕ ನಡೆಸಿದ ಪಿಎಚ್.ಡಿ ಅಧ್ಯಯನ (1992) 'ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ' ನಂತರ ಅದೇ ಹೆಸರಿನಲ್ಲಿ ಪುಸ್ತಕವಾಗಿ ಶ್ರೀನಿವಾಸ ಪುಸ್ತಕ ಪ್ರಕಾಶನ ಬೆಂಗಳೂರು ಇವರಿಂದ 2010ರಲ್ಲಿ ಪ್ರಕಟವಾಗಿದೆ.

'ಕನ್ನಡಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ' ಎಂಬುದು ಗೀತಾ ಎಸ್.ನಂದಿಹಾಳ ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿನ ಕನ್ನಡ ವಿಭಾಗದ ಮೂಲಕ ನಡೆಸಿದ ಪಿಎಚ್.ಡಿ ಅಧ್ಯಯನ(2002)ವಾಗಿದ್ದು ನಂತರ ಪುಸ್ತಕರೂಪದಲ್ಲಿ ಕಿಟೆಲ್ ಮಹಾವಿದ್ಯಾಲಯ, ಧಾರವಾಡ ಇವರಿಂದ 2010ರಲ್ಲಿ ಪ್ರಕಟಗೊಂಡಿದೆ.

ಸೋಲಿ ಜಾರ್ಜ್ ಅವರು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ ಪದವಿಗಾಗಿ ನಡೆಸಿದ ಅಧ್ಯಯನ 'ಕ್ರೈಸ್ತಗೀತೆಗಳು ಧರ್ಮ ಮತ್ತು ಕನ್ನಡತನ'(2012) ನಂತರ ಅದೇ ಹೆಸರಿನಲ್ಲಿ ಧಾತ್ರಿ ಪುಸ್ತಕ ಬೆಂಗಳೂರು ಇವರಿಂದ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿ ಕೆಥೋಲಿಕ್ ಕ್ರೈಸ್ತರು ಹಾಗೂ ಪ್ರೊಟೆಸ್ಟಂಟ್ ಕ್ರೈಸ್ತರ ಕನ್ನಡ ಗೀತೆಗಳ ಸಮಗ್ರ ಮಾಹಿತಿ ಇದೆ.

'ಪ್ರೊಟೆಸ್ಟಾಂಟ್ ಮಿಶನರಿಗಳ ಧಾರ್ಮಿಕ ಸಾಹಿತ್ಯ, ಸ್ವರೂಪ ಮತ್ತು ವೈಶಿಷ್ಟ' ಎಂಬುದು ಪ್ರೇಮಲತಾ ಕೋಟೆ ಇವರು ಧಾರವಾಡ ವಿಶ್ವವಿದ್ಯಾಲಯದ ಪಿ.ಎಚ್.ಡಿ ಪದವಿಗಾಗಿ ನಡೆಸಿದ ಅಧ್ಯಯನವಾಗಿದೆ(2014).

ಎಸ್.ಪಿ ಗೌಡರ ಅವರು ಕರ್ನಾಟಕ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ನಡೆಸಿದ ಅಧ್ಯಯನ 'ಕನ್ನಡ ಕ್ರೈಸ್ತ ಗೀತಗಳ ಅಧ್ಯಯನ' ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ ಇಲ್ಲಿಂದ 1997ರಲ್ಲಿ ಪ್ರಕಟಗೊಂಡಿದೆ. ಉಷಾರಾಣಿ ಅವರ 'ಹೆರ್ಮನ್ ಮ್ಯೋಗ್ಲಿಂಗ್ ಸಂಕಲಿಸಿದ ದಾಸರ ಪದಗಳು – ಒಂದು ಅಧ್ಯಯನ' (2002) ಹಾಗೂ ಸೌಮ್ಯ ಆನಂದಿ ಕೋಟ್ಯಾನ್ ಅವರ 'ಕನ್ನಡಕ್ಕೆ ಹೆರ್ಮನ್ ಮ್ಯೋಗ್ಲಿಂಗರ ಕೊಡುಗೆ' (2010) ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಎಂ.ಫಿಲ್ ಪದವಿಗಾಗಿ ನಡೆಸಿದ ಅಧ್ಯಯನಗಳಾಗಿವೆ.

ಅಶೋಕ್ ರಾಕೇಶ್ ಡಿಸೋಜ ಅವರ 'ಇಪ್ಪತ್ತನೆಯ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್' ಮತ್ತು ನೋರ್ಬರ್ಟ್ ಮಸ್ಕರೇಹ್ನಸ್‌ರವರ 'ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಬದಲಾವಣೆಯಲ್ಲಿ ಕ್ರೈಸ್ತ ಸಂಸ್ಥೆಗಳ ಪಾತ್ರ (1834–2008)' ಸಂಶೋಧನಾ ಪ್ರಬಂಧಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಇತಿಹಾಸ ವಿಭಾಗದ ಮೂಲಕ ಪಿಎಚ್.ಡಿ ಪದವಿಗಾಗಿ 2015ರಲ್ಲಿ ಮಂಡನೆಯಾಗಿದೆ.

ಸೆಲಿನ್ ವಾಸ್ ಅವರು ಮಂಗಳೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದಲ್ಲಿ ನಡೆಸಿದ ಪಿಎಚ್.ಡಿ ಅಧ್ಯಯನ 'Contribution of Christian Missionaries to Journalism in Karnataka' (2008)ದ ಬಹುಮುಖ್ಯ ಚರ್ಚೆಯು ಪತ್ರಿಕೋದ್ಯಮ ಮತ್ತು ಬಾಸೆಲ್ ಮಿಶನ್ ಸಂಬಂಧದ ಕುರಿತಾಗಿದೆ.

ಡೆನ್ನಿಸ್ ಫರ್ನಾಂಡಿಸ್ ಅವರು ಮಂಗಳೂರು ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಲ್ಲಿ ಡಾಕ್ಟರೇಟ್ ಪದವಿಗಾಗಿ ನಡೆಸಿದ ಅಧ್ಯಯನ (2006) 'Tulu World In European Writings' ದಲ್ಲಿ ಈ ವಿಷಯಕ್ಕೆ ಪೂರಕವಾದ ಅನೇಕ ಅಂಶಗಳಿವೆ.

ಶಶಿಕಾಂತ ಕೆ. ಅವರು ಹೈದರಾಬಾದ್ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ(2000) 'The Politics of Translation: A Study of Select Basel Mission Texts', ಪದ್ಮಶ್ರೀ ಬಿ. ಅವರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ(2004) 'Basel Mission and Education In South Kanara District 1834–1947' ಬಾಸೆಲ್ ಮಿಶನ್‌ಗೆ ಸಂಬಂಧಪಟ್ಟಿವೆ.

ಫೆಡ್ರಿಕ್ ಸುನಿಲ್ ಕುಮಾರ್ ಎನ್.ಐ. ಅವರು ಕಲ್ಲಿಕೋಟೆ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಮೂಲಕ ನಡೆಸಿದ ಪಿಎಚ್.ಡಿ ಅಧ್ಯಯನ(2006) 'The Basel Mission and Social Change-Malabar and South Canara A Case Study (1830-1956)' ಈ ವಿಷಯಕ್ಕೆ ಸಂಬಂಧಪಟ್ಟಿದೆ.

ಜೈಪ್ರಕಾಶ್ ರಾಘವಯ್ಯ ಅವರ ಎಂ.ಫಿಲ್ ಪ್ರಬಂಧ (1986) 'Basel Mission Industries In Malabar and South Canara 1834-1914 A Study of its social and economic impact' ನವದೆಹಲಿಯ ಜಿಯಾನ್ ಪಬ್ಲಿಶಿಂಗ್ ಹೌಸ್‌ನಿಂದ ಪ್ರಕಟವಾಗಿದೆ._

ಕ್ರಾಂತಿ ಫರಾಯ್ಸ್‌ರವರ ಪಿ.ಎಚ್.ಡಿ ಅಧ್ಯಯನವು 'The Christian Impact in South Kanara' ಎಂಬ ಹೆಸರಿನೊಂದಿಗೆ 1999ರಲ್ಲಿ ಪ್ರಕಟಗೊಂಡಿದೆ.

ಅಲ್ಲದೆ ಪೂರಕವಾಗಿ ಕನ್ನಡ ಬೈಬಲ್ ಮತ್ತು ನಿಘಂಟುಗಳಿಗೆ ಸಂಬಂಧಪಟ್ಟ ಸಂಶೋಧನೆಗಳನ್ನು ಗಮನಿಸುವುದಾದರೆ ಡೇವಿಡ್ ಟಿ.ಪುನೀತ್ ಅವರು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ(2008) 'ಕನ್ನಡ ಬೈಬಲ್ ಒಂದು ಅಧ್ಯಯನ', ಎಸ್ .ಎಸ್. ಅಂಗಡಿಯವರು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ (2000) 'ಮಿಶನರಿಗಳ ದ್ವಿಭಾಷಿಕ ನಿಘಂಟುಗಳು–ತೌಲನಿಕ ಅಧ್ಯಯನ', ಹೊನ್ನಮಟ್ಟಿ ಬಸವರಾಜ ಅವರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ ಪ್ರಬಂಧ (2004)'ಕಿಟೆಲ್ ಕೋಶದ ಗಾದೆಗಳು ಒಂದು ಸಾಂಸ್ಕೃತಿಕ ಅಧ್ಯಯನ' ಮೊದಲಾದವುಗಳನ್ನು ಗಮನಿಸಬಹುದು.

ಕ್ರೈಸ್ತದೈವಜ್ಞಾನ ಪದವಿಗಾಗಿ ಸಲ್ಲಿಸಲಾದ ಸಂಪ್ರಬಂಧಗಳು:

ಕರ್ನಾಟಕ ಥಿಯೊಲಾಜಿಕಲ್ ಕಾಲೇಜು ಮಂಗಳೂರು ಹಾಗೂ ಯುನೈಟೆಡ್ ಥಿಯೊಲಾಜಿಕಲ್ ಕಾಲೇಜು ಬೆಂಗಳೂರುಗಳಲ್ಲಿ ಬಿ.ಡಿ. ಪದವಿಗಾಗಿ ಸಲ್ಲಿಸಲಾಗಿರುವ ಸಂಪ್ರಬಂಧಗಳು ಈ ಹಿನ್ನೆಲೆಯಲ್ಲಿ ಗಮನಿಸಬೇಕಾದವು. ಇವು ಕನ್ನಡ ಮತ್ತು ಇಂಗ್ಲಿಷಿನಲ್ಲಿದ್ದು ಹಲವು ಸಂಶೋಧನಾತ್ಮಕ ಅಂಶಗಳಿವೆ. ಎಚ್. ಎಮ್ ವಾಟ್ಸನ್ ಅವರ 'ಸಾಮುವೆಲ್ ಹೆಬಿಕ್ ಮತ್ತು ಹೆರ್ಮನ್ ಮ್ಯೊಗ್ಲಿಂಗ್– ಸುವಾರ್ತಾ ಪ್ರಸಾರಣೆ ಮತ್ತು ವಿಧ– ಒಂದು ಅಧ್ಯಯನ' (1984), ಇಮ್ಯಾನ್ಯುವೆಲ್ ಎಸ್. ತುಮಕೂರು ಅವರ 'ಹುಬ್ಬಳ್ಳಿ ಧಾರವಾಡಗಳಲ್ಲಿ ಬಾಸೆಲ್ ಮಿಶನ್ ಮಿಶನರಿಗಳು ಶಿಕ್ಷಣಕ್ಕೆ ನೀಡಿದ ಕೊಡುಗೆ' (1997), ಮನಮೋಹನ್ ಪ್ರವೀಣ್ ಮಾಬೆನ್ ಅವರ 'ಬಾಸೆಲ್ ಮಿಶನ್ ಕನ್ನಡ ಸಂಗೀತಗಳಲ್ಲಿ ಕಂಡುಬರುವ ಕ್ರಿಸ್ತ ಸಿದ್ಧಾಂತ' (2005), ಕಿಶೋರ್ ಅವರ 'ಬಾಸೆಲ್ ಮಿಶನ್ ಪ್ರೆಸ್' (2005), ಎಬ್ನೇಜರ್ ಜತ್ತನ್ನ ಅವರ 'ತುಳು ಸಾಹಿತ್ಯಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ' (2007), ಗೇಬ್ರಿಯಲ್ ರೋನಿತ್ ಸ್ಯಾಮ್ಯುವೆಲ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಕೈಗಾರಿಕರಣಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ 1834–1914' (2007), ಪ್ರಶಾಂತ ನೊಯೆಲ್ ಕಾರ್ಕಡ ಅವರ 'ಸಿ.ಎಸ್.ಐ ಉಡುಪಿ ಲೊಂಬರ್ಡ್ ಸ್ಮಾರಕ (ಮಿಶನ್) ಆಸ್ಪತ್ರೆಯ ಚರಿತ್ರೆ ಹಾಗೂ ಸೇವೆಯ ಒಂದು ಅಧ್ಯಯನ' (2009), ರಮಾನಂದ ಅಮೃತರಾಜ್ ಖೊಡೆ ಅವರ 'ಗದಗ ಬೆಟಗೇರಿಯಲ್ಲಿ ಬಾಸೆಲ್ ಮಿಶನರಿಗಳ ವೈದ್ಯಕೀಯ ಸೇವೆ–ಸಿಎಸ್ಐ(ಬಿಎಂ) ಆಸ್ಪತ್ರೆಗಳ ಕುರಿತ ಒಂದು ಅಧ್ಯಯನ' (2011), ಪುನ್ನಪ್ಪ ಪುತ್ರಪ್ಪ ಬಂಡಿ ಅವರ 'ಬಾಗಲಕೋಟೆ ಜಿಲ್ಲೆಯಲ್ಲಿ ಬಾಸೆಲ್ ಮಿಶನರಿಗಳ ಸೇವೆ–ಹೆಚ್ಚಿನ ಪ್ರಾಧಾನ್ಯತೆ ಸುಮದ್ದಿ ಸಭೆ' (2011) ಕನ್ನಡದಲ್ಲಿ ಬಂದಿರುವವು.

ಕ್ರಿಸ್ಟೊಫರ್ ಎಲ್.ಫುರ್ಟಾಡೊ ಅವರ 'Brief History of the Work of The Basel Mission In Coorg from 1855 to 1914 With Special Reference to the Methods of Evangelism' (1964), ಜಯವಂತ್ ಎಂ.ಜೊಗುಳ ಅವರ 'Study of the Attitude of the Basel Mission Churches in India to the Church of South India' (1964), ಫ್ರಾಂಕ್ಲಿನ್ ಡಬ್ಲ್ಯೂ. ಜೇಮ್ಸ್ ಅವರ 'Historical Study of the Social Policy and Practice of the Basel Mission in South Kanara (1934–1914)' (1969), ಹೆಚ್.ಎಸ್.ವಿಲ್ಸನ್ ಅವರ 'Impact of Protestant Christianity on the Religious Social and Cultural Aspect of Tuluva Community in South Kanara' (1970), ಸುದರ್ಶನ ದೇವಧರ್ ಅವರ 'Origin, Growth, and Evaluation of the CSI (Basel Mission) Hospital Udupi (South Kanara District) Lambard Memorial Hospital' (1975), ಜಾನ್ ಶತಾನಂದ ಅವರ 'ಃಭೆಜಟ Mission Churches and Its Church's Its Movement in South India'(1976), ಜೆ. ನಿರಂಜನ್ ಅವರ 'Revives of the Missionary Work Done by the G. E. (Basel Mission) in Karnataka With Special Reference to Their Industrial Estd' (1981) ಇಂಗ್ಲಿಷಿನಲ್ಲಿವೆ.

ಪೌಲ್ ಜೆ.ಕತ್ತೆಬೆನ್ನೂರ ಅವರ 'The Contribution of the Basel Missionary Society to the Kannada Literature in the 19th Century' ಹಿಂದಿನ ಎಲ್.ಟಿ.ಎಚ್. ಪದವಿಗಾಗಿ ಸಲ್ಲಿಸಲಾದ ಪ್ರಬಂಧವಾಗಿದೆ.

ದೈವಜ್ಞಾನ ಕ್ಷೇತ್ರದಲ್ಲಿ ಎಮ್.ಟಿ.ಎಚ್. ಪದವಿಗಾಗಿ ಸಲ್ಲಿಸಿದ ವಿನೋದ್ ಅಲೆನ್ ಅವರ 'Contributions of the Basel Evangelical Mission's Educational Work to Malabar Society 1939–1914' (1995) ಹಾಗೂ ಪೌಲ್ ಡೇವಿಡ್ ಥೊಟ್ಟತ್ತಿಲ್ ಅವರ 'Socio-Religious Impact of the Basel Evangelical Mission in Malabar From 1839-1919' (1995) ಇಲ್ಲಿ ಗುರುತಿಸಬಹುದು.

ದೈವಜ್ಞಾನ ಕ್ಷೇತ್ರದಲ್ಲಿ ಪಿಎಚ್.ಡಿ ಪದವಿ (ಡಾಕ್ಟರ್ ಆಫ್ ಥಿಯಾಲಜಿ–ಡಿಟಿಎಚ್)ಗಾಗಿ 1996ರಲ್ಲಿ ವಿಜಯಕುಮಾರ ಅವರು ನಡೆಸಿದ ಅಧ್ಯಯನ 'Ecumenical Corporation of Missions in Karnataka –A Historical Analysis of the Evangelical Strategy of the Missions 1834-1988'. ಇದು ಪುಸ್ತಕ ರೂಪದಲ್ಲಿ ಐ.ಎಸ್.ಪಿ..ಸಿ.ಕೆ ದೆಹಲಿಯಿಂದ 2005ರಲ್ಲಿ ಪ್ರಕಟಗೊಂಡಿದೆ. ಫ್ರೆಡ್ರಿಕ್ ಅನಿಲ್ ಕುಮಾರ್ ಅವರು ರೇಗನ್ಸ್‌ಬರ್ಗ್ ವಿಶ್ವವಿದ್ಯಾಲಯದ ಡಿಟಿಎಚ್ ಪದವಿಗಾಗಿ ನಡೆಸಿದ ಅಧ್ಯಯನ 'Symbolism or Idolatry? - An appraisal of the use of symbols in Mission with special reference to the Basel Mission in Karnataka India, between 1834-1964' 2011ರಲ್ಲಿ ಪ್ರಕಟಗೊಂಡಿದೆ.

ಸ್ನಾತಕೋತ್ತರ ಪದವಿಯ ಆಂಶಿಕ ಅವಶ್ಯಕತೆಗಾಗಿ ಸಲ್ಲಿಸಲಾದ ಪ್ರಬಂಧಗಳು:

ಎಂ.ಎ. ಪದವಿಯ ಆಂಶಿಕ ಅವಶ್ಯಕತೆಗಾಗಿ ಸಲ್ಲಿಸಿದ ಪ್ರಬಂಧಗಳನ್ನು ಇಲ್ಲಿ ಗುರುತಿಸಬಹುದು. ಸೆಲಿನ್ ವಾಸ್ ಅವರು ಮಂಗಳೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದಲ್ಲಿ ಸ್ನಾತಕೋತ್ತರ ಪದವಿ(1982)ಯ ಆಂಶಿಕ ಅವಶ್ಯಕತೆಗಾಗಿ 'Contribution of Christian Missionaries to Journalism in South Kanara' ವಿಷಯವನ್ನು ಆಯ್ದುಕೊಂಡಿದ್ದರು. ವಿಕ್ಟೋರಿಯಾ ಶರೊನ್ ಹರ್ಬರ್ಟ್ ಅವರ 'Contribution of Basel German Evangelical Mission to Education in Malabar With Special Reference to Cannanore and Calicut District' (2003), ಕ್ಯಾಥರೀನ್ ಬಾಸ್ಟೆಂಜಲ್ ಅವರು ಲಂಡನ್ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯ ಆಂಶಿಕ ಅವಶ್ಯಕತೆಗಾಗಿ ಸಲ್ಲಿಸಿದ 'Basel Mission Industries in India 1834-1884 Improvisation or Policy?' (2010)ಗಳನ್ನು ಇಲ್ಲಿ ಗುರುತಿಸಬಹುದು.

ಪೂರಕ ಕೃತಿಗಳು:

ಬಾಸೆಲ್ ಮಿಶನ್ ಬಗೆಗೆ ವಿವರಗಳನ್ನು ಹೊಂದಿರುವ ಕೃತಿಗಳು ಬಂದಿವೆ. ಹಲವು ನೆನಪಿನ ಸಂಪುಟಗಳು ಸಮೃದ್ಧವಾದ ಮಾಹಿತಿಗಳನ್ನೊಳಗೊಂಡಿವೆ. ಎ.ಶೊಸ್ಸರ್ ಅವರ 'ಬಾಸೆಲ್ ಮಿಶನ್ ಸಂಘದ ನೂರು ವರ್ಷದ ಚರಿತ್ರೆಯು'(1915) ಕಿರುಪುಸ್ತಕ, ರೆವೆ.ಎಂ. ಮಿಂಚ್ ಮತ್ತು ಡಿ.ಬಂಕಾಪುರ ಅವರ 'ಧಾರವಾಡದ ಬಾಸೆಲ್ ಮಿಶನ್ ಸಭೆಯ ಶತಸಂವತ್ಸರಗಳ ಸಂಕ್ಷಿಪ್ತ ಚರಿತ್ರೆ' (1936), ರೆವೆ.ಜಯವಂತ ಎಮ್ ಜೋಗುಳ ಅವರು ಧಾರವಾಡದ ಹೆಬಿಕ್ ಮೆಮೊರಿಯಲ್ ಚರ್ಚ್‌ನ 150 ವರ್ಷಗಳ(1836–1986) ನೆನಪಿಗಾಗಿ ಸಂಪಾದಿಸಿದ 'ಬಾಸೆಲ್ ಮಿಶನ್(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)'(1987), ಕೊನೆಸಾಗರ ಡಿ.ಟಿ. ಮತ್ತು ಎಸ್.ಎಸ್.ಸಕ್ಕರಿ ಪ್ರಧಾನ ಸಂಪಾದಕರಾಗಿದ್ದ 'ಬಾಸೆಲ್ ಮಿಶನ್ –175'(2009)

ಮೊದಲಾದವು ಹಲವು ಪ್ರಾಥಮಿಕ ಮಾಹಿತಿಗಳನ್ನು ನೀಡುತ್ತವೆ. ಹಾಗೆಯೇ ರೆವೆ.ಕೆ.ಸಾಗರ್ ಸುಂದರ್ ರಾಜ್ ಸಂಪಾದಕತ್ವದ ಬಾಸೆಲ್ ಮಿಶ್ಯನ್ ದ್ವಿಶತಮಾನೋತ್ಸವ 1815–2015 (2015), ರೆವೆ.ಪಮೊದ್ ಗೋಣಿ ಸಂಪಾದಿಸಿರುವ ಮಿಶನ್ ಕೇರ್ಸ್ 2016 (2016) ಬಹುಮುಖ್ಯವಾದ ಆಕರಗಳನ್ನೊಳಗೊಂಡಿವೆ.

ಗಾಡ್ವಿನ್ ಶಿರಿ ಅವರು ಸಂಪಾದಿಸಿದ 'Wholeness in Christ, The legacy of the Basel Mission in India' (1985), ಜೆಂಕಿನ್ಸ್ ಪೌಲ್ ಅವರ 'Text and Documents- A short History of the Basel Mission' (1989), ಹಾಗೆಯೇ ಹಸ್ತಪ್ರತಿಗಳ ದಾಖಲೆಯಾದ 'Guide to the Basel Mission Indian Material in the Mission 21 Archive' (2011), ಕ್ರಿಸ್ಟೀನ್ ಕ್ರಿಸ್ಟೊವನ್ ವೆಡಲ್ ಮತ್ತು ಥಾಮಸ್ ಕೆ.ಕುನ ಸಂಪಾದಿಸಿದ 'Basel Mission – People, History, Perspectives 1815-2015'(2015) ಗಮನಿಸಬೇಕಾದುದು.

ನಾರ್ಮನ್ ಸಿ.ಸಾರ್ಜೆಂಟ್ ಬರೆದ 'From Missions to Church in Karnataka(1920-1950)' ಪುಸ್ತಕವು 1987ರಲ್ಲಿ ಪ್ರಕಟವಾಗಿದ್ದು ಇದು 1920ರ ನಂತರದಲ್ಲಿ ಬಾಸೆಲ್ ಮಿಶನ್‌ನ ಕಾರ್ಯಚಟುವಟಿಕೆಗಳು, ಸಂಸ್ಥೆಗಳು, ಬಾಸೆಲ್ ಮಿಶನ್ ಮತ್ತು ಇತರ ಮಿಶನ್‌ನ ಕಾರ್ಯಕ್ಷೇತ್ರಗಳು, ದಕ್ಷಿಣ ಸಭಾ ಪ್ರಾಂತಕ್ಕೆ ಸಂಬಂಧಿಸಿದ ವಿಚಾರ ಹಾಗೂ ಕರ್ನಾಟಕದಲ್ಲಿದ್ದ ಇತರ ಮಿಶನ್‌ಗಳ ಸಮಗ್ರ ಮಾಹಿತಿಗಳನ್ನೊಳಗೊಂಡಿದೆ. ಎಡೊನಾ ಈ.ಜೆ ಅವರ 'Economic Condition of the Protestant Christians in Malabar with Special Reference to the Basel Mission Church–A Research Study' ಎಂಬ ಕೃತಿಯು ಮಲಬಾರಿನ ಬಾಸೆಲ್ ಮಿಶನ್ ಚರ್ಚ್‌ಗೆ ಸಂಬಂಧಿಸಿದಂತೆ ಪ್ರೊಟೆಸ್ಟೆಂಟ್ ಕ್ರೈಸ್ತ ಆರ್ಥಿಕ ಪರಿಸ್ಥಿತಿಯ ಅಧ್ಯಯನವಾಗಿದ್ದು 1940ರಲ್ಲಿ ಪ್ರಕಟವಾಗಿದೆ.

ಅದೇ ರೀತಿ ವಿಶಾಲವಾದ ನೆಲೆಗಟ್ಟಿನ ಅನೇಕ ಕೃತಿಗಳಲ್ಲಿ ಬಾಸೆಲ್ ಮಿಶನ್ ಸಂಬಂಧವಾದ ಮಾಹಿತಿ ಕಂಡುಬರುತ್ತದೆ. ಉದಾಹರಣೆಗೆ ರೆವೆರೆಂಡ್ ವಿಜಯಕುಮಾರ್ ಅವರ 'ಕರ್ನಾಟಕದಲ್ಲಿ ಪ್ರೊತೆಸ್ತಾಂತ ಮಿಷನ್ನುಗಳ ಚರಿತ್ರೆ' (2004)ಯಲ್ಲಿ 9ನೇ ಅಧ್ಯಾಯದಲ್ಲಿ (ಪು.112–127) ಬಾಸೆಲ್ ಮಿಶನ್ ಹಿನ್ನೆಲೆ, ವಿವಿಧ ಕ್ಷೇತ್ರಗಳಿಗೆ ಕೊಡುಗೆ, ಇತರ ಮಿಶನ್‌ಗಳೊಂದಿಗೆ ಸಂಬಂಧಗಳನ್ನು ವಿವರಿಸಲಾಗಿದೆ. ಅದೇ ರೀತಿ ಎಡ್ವರ್ಡ್ ನೊರೋನ ಅವರ 'ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ' (1996), ಸುಮುಖಾನಂದ ಜಲವಳ್ಳಿ ಅವರ 'ಕನ್ನಡ ಸಾಹಿತ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರ ಕೊಡುಗೆ' (2000), ಬಿ.ಎಸ್. ತಲ್ವಾಡಿ ಅವರ 'ಕರ್ನಾಟಕ ಕ್ರೈಸ್ತರ ಇತಿಹಾಸ' (1989), ರೆವೆ.ಎಸ್.ಡಿ.ಎಲ್.ಅಳಗೋಡಿ ಅವರ 'ಭಾರತದಲ್ಲಿ ಕ್ರೈಸ್ತಧರ್ಮದ ಇತಿಹಾಸ'(2001), ಡಾ.ವರದರಾಜ ಹುಯಿಲಗೋಳ ಅವರ 'ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ' (1983) ಮೊದಲಾದ ಕೃತಿಗಳನ್ನು ಗಮನಿಸಬಹುದು.

ನಿರ್ದಿಷ್ಟವಾಗಿ ಫರ್ಡಿನೆಂಡ್ ಡಿ.ಕಿಟೆಲ್ ಬಗೆಗೆ ಹಲವು ಅಧ್ಯಯನಗಳು ನಡೆದಿವೆ. ಡಾ.ಆರ್.ಸಿ ಹಿರೇಮಠ ಪ್ರಧಾನ ಸಂಪಾದಕರಾಗಿದ್ದು ಡಾ.ವಾಮನ ಬೇಂದ್ರೆ ಮತ್ತು ಬಿ.ಟಿ.ದೇಸಾಯಿ ಸಂಪಾದಕರಾಗಿದ್ದ 'ಕನ್ನಡಕ್ಕೆ ಕಿಟೆಲ್ಲರ ಕೊಡುಗೆ' (1971), ವಿಲ್ಯಂ ಮಾಡ್ತಾ ಅವರ 'ಫ.ಕಿಟೆಲ್ : ಜೀವನ ಸಾಧನೆ–ಕೋಶ ರಚನೆ' (1994), ಜಿ.ಎಂ.ಹೆಗಡೆ ಅವರ 'ರೆವೆರೆಂಡ್ ಫರ್ಡಿನಾಂಡ್ ಕಿಟೆಲ್ ಜೀವನ ಹಾಗೂ ಕೃತಿ ಸಮೀಕ್ಷೆ' (1994), ವಿ.ಬಿ.ಮೊಳೆಯಾರ ಅವರ 'ಫರ್ಡಿನಾಂಡ್ ಕಿಟೆಲ್' (1995), ಶ್ರೀನಿವಾಸ ಹಾವನೂರ ಅವರ 'ರೆವರೆಂಡ್ ಎಫ್.ಕಿಟೆಲ್' (2001), ಫಾ.ವಿಲ್ಯಂ ಮಾಡ್ತಾ, ಡಾ.ಹೈಡ್ರೂನ್ ಬ್ರೂಕ್ನರ್, ಡಾ.ಎ. ಮುರಿಗೆಪ್ಪ ಮತ್ತು ಡಾ.ಎಚ್.ಎಂ.ಮಹೇಶ್ವರಯ್ಯ ಅವರು ಸಂಪಾದಿಸಿದ 'A Dictionary with Mission' (1998), ರೈನಾರ್ಡ್ ವೆಂಡ್ ಸಂಪಾದಿಸಿದ 'An Indian to the Indians?- One the initial Failure and Posthumous success of Missionary Ferdinand Kittel (1832–1903)' (2006) ಇತ್ಯಾದಿಗಳಿವೆ.

ಅದೇ ರೀತಿ ರೆವೆರೆಂಡ್ ಐವನ್ ಆಲ್ಬರ್ಟ್ಸ್ ಅವರ 'ಹೆರ್ಮನ್ ಫ್ರೆಡ್ರಿಕ್ ಮ್ಯೋಗ್ಲಿಂಗ್' (1989), ಆಲ್ಬ್ರೆರ್ಟ್ ಫ್ರೆಂಜ್ ಮತ್ತು ಸ್ಕಾರಿಯಾ ಜಕಾರಿಯಾ ಅವರು ಸಂಪಾದಿಸಿದ 'Dr.Hermann Gundert and Malayalam Language' (1993), ಕೆ.ಕೆ.ಎನ್ ಕುರುಪ್ ಮತ್ತು ಕೆ.ಜೆ.ಜಾನ್ ಸಂಪಾದಿಸಿದ 'Legacy of Basel Mission and Hermann Gundert in Malabar' (1993), ಆಲ್ಬ್ರೆರ್ಟ್ ಫ್ರೆಂಜ್ ಅವರ ಕೃತಿಗಳಾದ 'Herrmann Moegling- A Biography by Dr. Hermann Gundert' (1997), 'A Journey Into Religions -Hermann Mogling (1811-1881) Missionary and Linguist in India, on the Occasion of his 200th Birth Anniversary' (2011) ಹಲವು ಆಕರಗಳನ್ನೊಳಗೊಂಡಿದೆ.

ಹಾಗೆಯೇ ಆಲ್ಬ್ರೆರ್ಟ್ ಫ್ರೆಂಜ್ ಅವರ ಕೃತಿಗಳಾದ 'George Richter-1829-1913- In South India 1855-1896, In Madikeri 1856-1896-Life and Works in the Context of Colleagues Family and Kodagu Society'(2014) ಮತ್ತು 'George Richter(1829-1913) His work in Kodagu on the Basis of Official Reports' (2014) ಗಮನಿಸಬೇಕಾದುದು.

ರೆ.ಜಾರ್ಜ್ ಎನ್.ಥಾಮ್ಸನ್ ಅವರ 'Samuel Hebich of India Master Fisher of Men'(1915) ಕೃತಿಯನ್ನು ಜೆ.ಬಿ.ಕರ್ಕಡ ಅವರು 'ಸಮುವೇಲ್ ಹೆಬಿಕ್–ಭಕ್ತಾಗ್ರಣಿಯೋರ್ವರ ಜೀವನ ಚರಿತ್ರೆ' ಎಂದು ಸಂಕ್ಷಿಪ್ತವಾಗಿ ಅನುವಾದಿಸಿದ್ದು ಅದು 1934ರಲ್ಲಿ ಪ್ರಕಟಗೊಂಡಿದೆ. ಆಲ್ಬ್ರೆರ್ಟ್ ಫ್ರೆಂಜ್ ಮತ್ತು ಸ್ಟೀಫನ್ ಫ್ರೆಂಜ್ ಸಂಪಾದಿಸಿದ 'Future in Remembrance' (2007), ಮಾರ್ಟಿನ್ ಟಮ್ಕೆ ಹಾಗೂ ಗ್ಲ್ಯಾಡ್ಸನ್ ಜತ್ತನ್ನ ಸಂಪಾದಿಸಿದ 'Construction of the Other, Identification of the self- German Mission in India' (2012) ಮೊದಲಾದವುಗಳನ್ನು ಗುರುತಿಸಬಹುದು.

ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಬಂದಿರುವ ಆಲ್ಬ್ರೆರ್ಟ್ ಫ್ರೆಂಜ್, ಪಾಲ್ ಜೆಂಕಿನ್ಸ್ ಮೊದಲಾದವರ ಕೃತಿಗಳು ಅನೇಕ ಮಾಹಿತಿಗಳನ್ನೊಳಗೊಂಡಿದ್ದು ಮುಂದಿನ ಅಧ್ಯಯನಗಳಿಗೆ ಅವಶ್ಯಕವಾಗಿವೆ.

ಬೆನೆಟ್ ಜಿ. ಅಮ್ಮನ್ನ ಅವರ ತುಳು ಕೃತಿ 'ಮದಪ್ಯರಾವಂದಿ ವಿದೇಶಿ ತುಳುವೆ: ಜಾನ್ ಜೇಮ್ಸ್ ಬ್ರಿಗೆಲ್ (1832–1887) ಬದ್‌ಕ್ – ಬರವು' (2011) ಅನೇಕ ಮಾಹಿತಿಗಳನ್ನೊಳಗೊಂಡಿದೆ. ರೆವೆ. ಪೌಲ್ ಎಫ್.ಶಿಂದೆಯವರ 'ವಾತ್ಸಲ್ಯದ ಒಡಲು (ನಮ್ಮ ಪ್ರೀತಿಯ ಹನ್ನಾ ಸಿಸ್ಟರ್)' (2010) ಈ ತೆರನಾದುದು.

ನಿರ್ದಿಷ್ಟ ವಿಚಾರವೊಂದರ ಬಗೆಗೆ ಬರುವ ಕೃತಿಯಲ್ಲಿ ಬಾಸೆಲ್ ಮಿಶನ್‌ನ ವಿವಿಧ ಆಯಾಮಗಳ ಮಾಹಿತಿಗಳು ಪೂರಕವಾಗಿ ದಾಖಲಾಗಿವೆ. ಉದಾಹರಣೆಗೆ, ಡಾ.ಪೀಟರ್ ವಿಲ್ಸನ್ ಪ್ರಭಾಕರ ಅವರ 'ಮಂಗಳೂರು ಹಂಚು' (1999) ಬಾಸೆಲ್ ಮಿಶನ್ ಕೈಗಾರಿಕೆಯ ವಿವರವನ್ನೊಳಗೊಂಡರೆ ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರ 'ಅಕ್ಷರಶಿಲ್ಪಿ ಅತ್ತಾವರ ಅನಂತಾಚಾರ್ಯ'(2003) ಬಾಸೆಲ್ ಮಿಶನ್ ಮುದ್ರಣಾಲಯದ ವಿವರಗಳನ್ನು

ಒಳಗೊಳ್ಳುತ್ತದೆ. ಬೆನೆಟ್ ಜಿ. ಅಮ್ಮನ್ನ ಅವರ 'ಬಿಲ್ಲವರು ಮತ್ತು ಕ್ರೈಸ್ತರು (ಪಾಂಗಳಗುಡ್ಡೆ ಕ್ರೈಸ್ತ ಹಿನ್ನೆಲೆಯಲ್ಲಿ)' (2005) ಸೂಕ್ಷ್ಮ ವಿವರಗಳನ್ನು ಒಳಗೊಂಡಿದೆ. ರಮಾನಾಥ ಕೋಟೆಕಾರ್ ಅವರ 'ಬಿಲ್ಲವರು ಮತ್ತು ಬಾಸೆಲ್ ಮಿಶನ್'(2012) ನಿರ್ದಿಷ್ಟವಾಗಿ ಬಿಲ್ಲವ ಸಮುದಾಯ ಮತ್ತು ಬಾಸೆಲ್ ಮಿಶನ್‌ನ ಸಂಬಂಧವನ್ನು ವಿವರಿಸುತ್ತದೆ.

ಮಾರಾ ಎಸ್.ಎ. ಅವರು ಅನುವಾದಿಸಿರುವ ಫರ್ತ್ ಸಿ.ಬಿ. ಅವರ ಮೂಲ ಕೃತಿ 'ಭಾರತೀಯ ಕ್ರೈಸ್ತ ಸಭಾ ಚರಿತ್ರೆಯ ಪ್ರವೇಶಿಕೆ' (1972) ಹಾಗೂ ಲೋಕೇಶ್ ಕೆ.ಎಂ. ಸಂಪಾದಿಸಿ ಅನುವಾದಿಸಿರುವ ರೆವರೆಂಡ್ ಜಿ.ರಿಕ್ಟರ್ ಅವರ ಆಂಗ್ಲ ಮೂಲದ ಕೃತಿ 'ಕೊಡಗು ಪ್ರಾಂತ್ಯದಲ್ಲಿ ಕಂಡು ಬರುವ ಜಾತಿಗಳು ಮತ್ತು ಬುಡಕಟ್ಟು ಜನಾಂಗಗಳ ವೃತ್ತಾಂತ ಸಂಹಿತೆ'(2011)ಯಲ್ಲಿಯೂ ಪೂರಕ ಮಾಹಿತಿಗಳಿವೆ.

ಐ.ಮ.ಮುತ್ತಣ್ಣ ಅವರ 19ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ(1969)ಯಲ್ಲಿ ಕೆಲವು ಅಂಶಗಳಿವೆಯಾದರೂ ಅದರಲ್ಲಿ ಅನೇಕ ಮಿತಿಗಳಿವೆ.

ಹಲವೆಡೆ ಇತರ ವಿಷಯಗಳೊಂದಿಗೆ ಸಂಶೋಧನಾತ್ಮಕವಾಗಿ ಬಾಸೆಲ್ ಮಿಶನ್ ಪ್ರಸ್ತಾಪಗೊಳ್ಳುತ್ತದೆ. ಉದಾಹರಣೆಗೆ ಶ್ರೀನಿವಾಸ ಹಾವನೂರ ಅವರ 'ಹೊಸಗನ್ನಡದ ಅರುಣೋದಯ'(1974)ದಲ್ಲಿ ಹಲವು ಅಂಶಗಳು ಮೊದಲ ಬಾರಿಗೆ ದಾಖಲಾಗುತ್ತವೆ, ಇದು 2000ನೇ ಇಸವಿಯಲ್ಲಿ ಪರಿಷ್ಕೃತಗೊಂಡು ಮರುಮುದ್ರಣಗೊಂಡಿದೆ. ಈ ಸಂಶೋಧನ ಗ್ರಂಥದಲ್ಲಿ ಮೊದಲ ಬಾರಿಗೆ ಬಾಸೆಲ್ ಮಿಶನ್ ಅವರ ಅನೇಕ ಚಟುವಟಿಕೆಗಳ ಮಾಹಿತಿಗಳು ದಾಖಲಾಗುತ್ತವೆ. ಎಲ್ಲಾ ದೃಷ್ಟಿಯಿಂದಲೂ ಅತ್ಯಂತ ಗಮನಾರ್ಹವಾದ ಕಾರ್ಯ ಇದು. ಮುದ್ರಣ ಮತ್ತು ಗ್ರಂಥೋದ್ಯಮ, ಶಿಕ್ಷಣ ರಂಗ ಮತ್ತು ಸಾಹಿತ್ಯ ವಿಕಾಸ, ಮಿಶನರಿ ಜನರ ಸಾಹಿತ್ಯ ಕಾರ್ಯ, ಭಾಷಾಭ್ಯಾಸ, ಕ್ರೈಸ್ತ ಸಾಹಿತ್ಯ, ಪತ್ರಿಕಾ ಪ್ರಪಂಚ ಮೊದಲಾದ ಶೀರ್ಷಿಕೆಗಳಡಿಯಲ್ಲಿ ದಾಖಲಾದ ಹಲವು ಅಂಶಗಳು ಮುಂದಿನ ಸಂಶೋಧನೆಗಳಿಗೆ ಭದ್ರವಾದ ಬುನಾದಿಯನ್ನೊದಗಿಸಿವೆ. ರಾ.ಯ.ಧಾರವಾಡಕರ ಅವರ ಹೊಸಗನ್ನಡ ಸಾಹಿತ್ಯದ ಉದಯಕಾಲ(1975)ವು ಇದೇ ಮಾದರಿಯದಾಗಿದ್ದು ಅನೇಕ ಪೂರಕ ವಿಚಾರಗಳನ್ನು ಒಳಗೊಂಡಿದೆ.

ಆಕರ ಶೋಧದ ನೆಲೆಗಟ್ಟಿನಲ್ಲಿ ನೋಡಿದಾಗ ಡಾ.ಎಂ.ಎಸ್.ದುರ್ಗಾಪ್ರವೀಣ ಮತ್ತು ಬೆನೆಟ್ ಜಿ.ಅಮ್ಮನ್ನ ಅವರು ಸಂಪಾದಿಸಿದ 'ತುಳು ವಿಕ್ರಮಾರ್ಕ ಕಥೆ' (2014) ಹಾಗೂ 'ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು' (2015) ಬಾಸೆಲ್ ಮಿಶನರಿಗಳ ಅಪ್ರಕಟಿತ ಹಸ್ತಪ್ರತಿಗಳನ್ನು ಬೆಳಕಿಗೆ ತರುವುದು ಮಾತ್ರವಲ್ಲದೆ ವಿವಿಧ ಆಯಾಮಗಳ ಪೂರಕ ಮಾಹಿತಿಗಳನ್ನು ನೀಡುತ್ತವೆ. ಇವು ತುಳುವಿನ ಆಧುನಿಕ ಪೂರ್ವ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಬಾಸೆಲ್ ಮಿಶನರಿಗಳ ಕೊಡುಗೆಗಳ ಬಗೆಗಿನ ಅಪೂರ್ವ ಸಂಶೋಧನೆಗಳಾಗಿವೆ. ಇದುವರೆಗಿನ ಪ್ರಕಟಿತ ಮಾಹಿತಿಗಳ ಸಂಶೋಧನೆಗಳಿಗಿಂತ ಮುಂದುವರೆದು ಕಣ್ಮರೆಯಾಗುತ್ತಿರುವ ಮೂಲ ಆಕರಗಳನ್ನು ಶೋಧಿಸಿ ಹೊಸವಿನ್ಯಾಸದಲ್ಲಿ ಒದಗಿಸಿರುವುದು ತುಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಪ್ರಮುಖ ಬೆಳವಣಿಗೆಯಾಗಿದೆ.

**ಲೇಖನಗಳು**

ಅವಿಭಜಿತ ದಕ್ಷಿಣ ಕನ್ನಡದಲ್ಲಿ ಪ್ರಕಟವಾದ ಸ್ಮರಣ ಸಂಚಿಕೆಗಳು ಅಥವಾ ನೆನಪಿನ ಸಂಪುಟಗಳಿಗೆ ಇಡೀ ಕನ್ನಡ ಜಗತ್ತಿನಲ್ಲಿಯೇ ಒಂದು ವಿಶಿಷ್ಟವಾದ ಸ್ಥಾನವಿದೆ. ಬಹಳ ಮಹತ್ವದ ಲೇಖನಗಳು ಇವುಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಸಾಹಿತ್ಯ ಸಮ್ಮೇಳನಗಳು, ತುಳು ಸಮ್ಮೇಳನಗಳು, ಅಭಿನಂದನ ಗ್ರಂಥಗಳು, ಚರ್ಚ್ ಸ್ಮರಣ ಸಂಚಿಕೆಗಳು, ಸಾಂದರ್ಭಿಕ ಸ್ಮರಣ ಗ್ರಂಥಗಳು, ಇತ್ಯಾದಿಗಳಲ್ಲಿ ಪ್ರಕಟವಾದ ಕನ್ನಡ, ತುಳು, ಇಂಗ್ಲಿಷ್ ಲೇಖನಗಳನ್ನು ಗುರುತಿಸಬಹುದು. ಮಂಗಳೂರು, ಉಡುಪಿ, ಕುಂದಾಪುರ, ಮಡಿಕೇರಿ, ಹುಬ್ಬಳ್ಳಿ, ಧಾರವಾಡ, ಗದಗ, ಮುಂಬಯಿ ಮುಂತಾದ ಸ್ಥಳಗಳಲ್ಲಿ ಬಾಸೆಲ್ ಮಿಶನ್ ಸ್ಥಾಪಿಸಿದ ಮುಂದೆ ಶತಮಾನ ಕಂಡ ಸಭೆ, ಶಾಲೆ, ಆಸ್ಪತ್ರೆ, ಆಶ್ರಮ ಮೊದಲಾದವುಗಳ ಬಗೆಗೆ ಹಲವಾರು ಲೇಖನಗಳು ಸ್ಮರಣ ಸಂಚಿಕೆಗಳಲ್ಲಿ, ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಚಾರಿತ್ರಿಕ ಹೆಜ್ಜೆಗುರುತುಗಳನ್ನು ದಾಖಲಿಸುತ್ತವೆ. ಇವುಗಳಲ್ಲಿ ಬಹುತೇಕ ಪ್ರಾಥಮಿಕ ಆಕರಗಳನ್ನು ಬಳಸಿಕೊಂಡಿರುವುದು ವಿಶೇಷ.

ಬೆನೆಟ್ ಜಿ.ಅಮ್ಮನ್ನ ಅವರು ಕ್ಷೇತ್ರಕಾರ್ಯ ಮಾಹಿತಿ ಹಾಗೂ ಮೂಲ ಆಕರಗಳನ್ನು ಅನುಲಕ್ಷಿಸಿ ಬರೆದ ಕನ್ನಡ ಮತ್ತು ತುಳು ಸಂಶೋಧನಾ ಲೇಖನಗಳು ಹಲವೆಡೆ ಪ್ರಕಟಗೊಂಡಿವೆ. ತುಳು ಅಕಾಡೆಮಿಯ ಪತ್ರಿಕೆ ಮದಿಪು–1(1996)ರಲ್ಲಿ **'ನೂದು ವರ್ಷ** ಪಿರವುದ ನಿಘಂಟ್', ಮದಿಪು–15 (1999,ಸಂ.15)ರಲ್ಲಿ 'ತುಳು ಬಾಸೆ ಬೊಕ್ಕ ಕ್ರೈಸ್ತ ಸಾಹಿತ್ಯ', 'ಕೊಡಿಪು'ವಿನಲ್ಲಿ 'ಕೆಲವು ಕ್ರೈಸ್ತ ಪತ್ರಿಕೆ ಹಾಗೂ ವರದಿಗಳಲ್ಲಿ ತುಳುನಾಡು' (ಪು.240–ಪು.245), 'ಕಲೆಂಬಿ'ಯಲ್ಲಿ 'ಚರಿತ್ರೆ ಹೇಳುವ ಕನ್ನಡ ಪಂಚಾಂಗ' (ಪು.197), 'ತುಳು ಸಾಹಿತ್ಯ ಚರಿತ್ರೆ'ಯಲ್ಲಿ 'ಮಿಶನರಿಗಳ ಕಾಲದ ತುಳು ಸಾಹಿತ್ಯ' (ಪು.763–791), 'ಹೊಂಬಿದಿರು'ವಿನಲ್ಲಿ 'ಡೇನಿಯಲ್ ಸ್ಯಾಂಡರ್‌ಸನ್' ಬಗೆಗಿನ ಲೇಖನ(ಪು.99–100) , 'ಪೊಲಿ'ಯಲ್ಲಿ 'ತುಳು ಭಾಷೆ ಮತ್ತು ವಿದೇಶಿಯರು'(ಪು.259) ಮೊದಲಾದವು ಬಾಸೆಲ್ ಮಿಶನರಿಗಳ ವಿವಿಧ ಚಟುವಟಿಕೆಗಳ ವಿವರಗಳನ್ನು ಅಧಿಕೃತವಾಗಿ ದಾಖಲಿಸುತ್ತವೆ. 'ಸಿ.ಎಸ್.ಐ. ಯುನಟಿ ಸಭೆ, ಮುಲ್ಕಿ ಚರಿತ್ರೆಯ ಪುಟದಲ್ಲಿ' ಇದು ಮುಲ್ಕಿ ಸಭೆಯ 150ನೇ ವರ್ಷ(1895–2000) ಮತ್ತು ಯೂನಿಟಿ ದೇವಾಲಯ ಕಟ್ಟಡದ 150ನೇ ವರ್ಷ(1856–2006) ಸಂದರ್ಭದ ಲೇಖನವಾಗಿದ್ದು ಇದೇ ರೀತಿ ಇವರು ಬಲ್ಮಠ, ಮಡಿಕೇರಿಗುಡ್ಡೆ, ಗೋರಿಗುಡ್ಡೆ, ಗುಡ್ಡೆ, ಶಿರ್ವ, ಮಣಿಪುರ, ಮಲ್ಪೆ, ಬೊಲ್ಮ, ಕಾರ್ಕಳ ಇತ್ಯಾದಿ 12 ಸಭೆಗಳ ಚರಿತ್ರೆಯನ್ನು ವಿವಿಧ ಸ್ಮರಣ ಸಂಚಿಕೆಗಳಲ್ಲಿ ಬರೆದಿದ್ದಾರೆ. 2014ರಲ್ಲಿ ಕಾಸ್ಥೆಸ್ ಸಂಸ್ಥೆ ಪ್ರಕಟಿಸಿದ ಸ್ಮರಣ ಸಂಚಿಕೆಯಲ್ಲಿ ತುಳುನಾಡು ಮತ್ತು ಕೊಡಗಿನಲ್ಲಿ ಬಾಸೆಲ್ ಮಿಶನ್ ಸ್ಥಾಪಿಸಿದ ಎಲ್ಲಾ ಶಾಲೆಗಳ ಸಂಕ್ಷಿಪ್ತ ಚರಿತ್ರೆಯನ್ನು ದಾಖಲಿಸಿದ್ದು ಇದರಲ್ಲಿ ಬಾಸೆಲ್ ಮಿಶನ್ ಸ್ಥಾಪಿಸಿದ ಶಾಲೆಗಳು, ಅವುಗಳಲ್ಲಿ ಮುಚ್ಚಿದ ಶಾಲೆಗಳು, ಮಿಶನ್ ಸ್ಥಾಪಿಸಿ ಪ್ರಸ್ತುತ ಖಾಸಗಿಯಾಗಿ ನಡೆಯುತ್ತಿರುವ ಶಾಲೆಗಳ ವಿವರಗಳಿವೆ.

ತೋನ್ಸೆ ಮಾಧವ ಅನಂತ ಪೈ ಅಭಿನಂದನ ಗ್ರಂಥ ಸುದರ್ಶನ(1977)ದಲ್ಲಿ ರೆ. ಫಾ. ವಾಲ್ಟರ್ ಅವರ 'ಅಭಿವೃದ್ಧಿಯಲ್ಲಿ ಕ್ರೈಸ್ತ ಧರ್ಮ ಸಭೆಯ ಪಾತ್ರ' ಮತ್ತು ಶ್ರೀನಿವಾಸ ಹಾವನೂರು ಅವರ 'ಮಂಗಳೂರು ಬೋಟನಿ ಅಟೋಗ್ರಫಿ' ಎಂಬ ಲೇಖನಗಳು ಪ್ರಕಟವಾಗಿದೆ. 'ಹೊಂಬಿದಿರು'ವಿನಲ್ಲಿ ಎಡ್ವರ್ಡ್ ನೊರೋನ್ಹಾ ಅವರ 'ಹರ್ಮನ್ ಮೋಗ್ಲಿಂಗ್'(ಪು.102–105), ಡಾ.ಶ್ರೀನಿವಾಸ ಹಾವನೂರ ಅವರ 'ಫರ್ಡಿನೆಂಡ್ ಕಿಟೆಲ್'(ಪು.117–120), 'ಫ್ರೆಡ್ರಿಕ್ ಜಿಗ್ಲರ್'(ಪು.121–122), ಪ್ರಕಟವಾಗಿವೆ. ಪ್ರೊ.ಅಮೃತ ಸೋಮೇಶ್ವರ ಅವರ ಅಭಿನಂದನ ಗ್ರಂಥ 'ಸಿರಿ'ಯಲ್ಲಿ ಡಾ.ಕೆ.ಕುಶಾಲಪ್ಪ ಗೌಡ ಅವರ 'ರೆ.ಜೆ.ಬ್ರಿಗೆಲ್ ಅವರ ತುಳು ವ್ಯಾಕರಣ –ಒಂದು ಅವಲೋಕನ' ಪ್ರಕಟವಾಗಿದೆ. 'ತುಳುವರಿವರು' ಬಹಳ ಮುಖ್ಯವಾದುದಾಗಿದ್ದು ಇದರಲ್ಲಿ ಡಾ.

ಯು.ಪಿ.ಉಪಾಧ್ಯಾಯ ಅವರ 'ತುಳುವಿನ ಮೊದಲ ವೈಯಾಕರಣ ಬ್ರಿಗೆಲ್', ಡಾ.ಕೆ.ಪದ್ಮನಾಭ ಕೇಕುಣ್ಣಾಯ ಅವರ 'ತುಳುವಿನ ಮೊದಲ ನಿಘಂಟುಕಾರ ಅಗಸ್ಟ್ ಮ್ಯಾನರ್', ಪ್ರೊ.ಅಮೃತ ಸೋಮೇಶ್ವರ ಅವರ '19ನೇ ಶತಮಾನದಲ್ಲಿ ತುಳು ಸಾಹಿತ್ಯಕ್ಕೆ ಮಿಶರಿಗಳ ಕೊಡುಗೆ' ಪ್ರಕಟವಾಗಿದೆ. 'ತುಳು ಸಾಹಿತ್ಯ ಚರಿತ್ರೆ'ಯಲ್ಲಿ ಎಬ್ನೇಜರ್ ಜತ್ತನ್ನ ಅವರ 'ತುಳು ಕ್ರೈಸ್ತ ಧಾರ್ಮಿಕ ಸಾಹಿತ್ಯ' (ಪು.792–805) ಶಶಿಕಾಂತ ಕೆ. ಅವರ 'ತುಳುವ ಅಧ್ಯಯನ: ವಸಾಹತುಶಾಹಿ ಸಂದರ್ಭ' (ಪು.806–812) ಪ್ರಕಟವಾಗಿವೆ.

ಕರ್ನಾಟಕ ದರ್ಶನದಲ್ಲಿ ಪ್ರಕಟವಾದ ಸಿ.ಡಿ.ಉತ್ತಂಗಿಯವರ 'Contribution of Christian Missionaries to the Development of Karnatak'(ಪಿ446–454), 'ಪೊಲಿ'ಯಲ್ಲಿ ಪ್ರಕಟವಾದ ಪೀಯಸ್ ಫಿಡೆಲಿಸ್ ಪಿಂಟೊ ಅವರ 'Christians in South Canara'(ಪಿ269), ಬೆನೆಟ್ ಜಿ. ಅಮ್ಮನ್ನರವರ ತುಳು ಭಾಷೆ ಮತ್ತು ವಿದೇಶಿಯರು (ಪು.529) ಪೀಟರ್ ವಿಲ್ಸನ್ ಪ್ರಭಾಕರ್‌ರವರ 'Tile Industry' (ಪಿ.112) ವಿದ್ಯಾನಿಧಿ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾದ ರೈಟ್ ರೆವೆ.ಎಸ್.ಆರ್.ಫುರ್ಟಾಡೊ ಅವರ 'The Contribution of Basel Evangelical Missionary Society in India', Coastal Karnatakaದಲ್ಲಿ ಪ್ರಕಟವಾದ ಹೈಡ್ರೂನ್ ಬ್ರೂಕ್ನರ್ ಅವರ 'The Basel Mission and the Bhuta Cult' ಲೇಖನ, 'ಕಲೆಂಬಿ'ಯಲ್ಲಿ ಪ್ರಕಟವಾದ ವೀಣಾ ಮಾಬೆನ್ ಅವರ 'Tulunadu in German Writings in the Basel Mission Journals and Magazines – Some Glimpses' ಹಲವು ಪೂರಕ ಮಾಹಿತಿಗಳನ್ನು ಒಳಗೊಂಡಿದೆ. ಕೆ.ಜೈಪ್ರಕಾಶ್ ರಾಘವಯ್ಯ ಅವರ ಃಭಿಜಟ Mission Industries in Malbar and South Canara 1834–1914 ಎಂಬ ಲೇಖನ (1990) ಪ್ರಕಟವಾಗಿದೆ.

ಎಮ್.ಆರ್.ಟಿ. ಪಾಲ್‌ರವರು ಸಂಪಾದಿಸಿ ಘುಠಟಿ ಚಿಟಿಜ ಇತಚಿಟಿರಿಜಟಘುಟ ವಿಭಾಗವು ಪ್ರಕಟಿಸಿದ ಮೂರು ಸ್ಮರಣ ಸಂಚಿಕೆಗಳು ಬಾಸೆಲ್ ಮಿಶನ್‌ನ ಇಂಗ್ಲಿಷ್ ವರದಿಗಳನ್ನು ಆಧರಿಸಿ ತಯಾರಿಸಲಾಗಿದ್ದು ದ.ಕ. ಉಡುಪಿ. ಕೊಡಗು. ವಿಭಾಗದಲ್ಲಿ ಬಾಸೆಲ್ ಮಿಶನ್ ಸೇವೆ, ಮಿಶನರಿಗಳು, ದೇಶೀಯ ಮಿಶನರಿಗಳ ಕುರಿತಂತೆ ಸಾಕಷ್ಟು ಮಾಹಿತಿಗಳನ್ನು ಹೊಂದಿವೆ.

ಪ್ರಸ್ತುತ ಪ್ರಬಂಧದಲ್ಲಿ ಈಗಾಗಲೇ ನಡೆದಿರುವ ಸಂಶೋಧನೆಗಳನ್ನು ಗುರುತಿಸುವುದರ ಜೊತೆಗೆ ಮುಂದಿನ ಅಧ್ಯಯನಗಳಿಗೆ ಆಕರಗಳಾಗಬಲ್ಲ ಬರವಣಿಗೆಗಳ ವಿವರಗಳನ್ನು ಕ್ರೋಢೀಕರಣದ ನೆಲೆಗಟ್ಟಿನಲ್ಲಿ ದಾಖಲು ಮಾಡಲಾಗಿದೆ.

**ಆಕರ ಸೂಚಿ**

**ಕನ್ನಡ**


1. ಅಳಗೋಡಿ, ಎಸ್.ಡಿ.ಎಲ್., ರೆವೆ., 2001, ಭಾರತದಲ್ಲಿ ಕ್ರೈಸ್ತಧರ್ಮದ ಇತಿಹಾಸ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು
2. ಐವನ್ ಆಲ್ಬರ್ಟ್ಸ್, ರೆವೆ., 1989, ಹೆರ್ಮನ್ ಫ್ರೆಡ್ರಿಕ್ ಮ್ಯೋಗ್ಲಿಂಗ್, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು
3. ಗೀತ ಎಸ್.ನಂದಿಹಾಳ, 2003, ಕನ್ನಡಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ, ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ
4. ಗೌಡರ ಎಸ್.ಪಿ, 1997, ಕನ್ನಡ ಕ್ರೈಸ್ತ ಗೀತಗಳ ಅಧ್ಯಯನ, ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ
5. ತಲ್ವಾಡಿ ಬಿ.ಎಸ್., 1989, ಕರ್ನಾಟಕದಲ್ಲಿ ಕ್ರೈಸ್ತರ ಇತಿಹಾಸ, ಕನ್ನಡ ಕಥೋಲಿಕರ ಸಂಘ, ಬೆಂಗಳೂರು
6. ದುರ್ಗಾಪ್ರವೀಣ ಎಂ.ಎಸ್.,ಬೆನೆಟ್ ಜಿ. ಅಮ್ಮನ್ನ, 2015, ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
7. ಧಾರವಾಡಕರ ರಾ.ಯ., 1975, ಹೊಸಗನ್ನಡ ಸಾಹಿತ್ಯದ ಉದಯಕಾಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
8. ಪಾದೇಕಲ್ಲು ವಿಷ್ಣು ಭಟ್ಟ(ಸಂ), 1997, ತುಳುವರಿವರು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
9. ಪಾಲ್ತಾಡಿ ರಾಮಕೃಷ್ಣ ಆಚಾರ್, 2003, ಅಕ್ಷರಶಿಲ್ಪಿ ಅತ್ತಾವರ ಅನಂತಾಚಾರ್ಯ, ಸುಪ್ರಿಯ ಪ್ರಕಾಶನ, ಪುತ್ತೂರು
10. ಪೀಟರ್ ವಿಲ್ಸನ್ ಪ್ರಭಾಕರ, 1989, ದಕ್ಷಿಣ ಕನ್ನಡದಲ್ಲಿ ಬಾಸೆಲ್ ಮಿಷನ್, ಕನ್ನಡ ಸಂಘ,ವಿವೇಕಾನಂದ ಕಾಲೇಜು, ಪುತ್ತೂರು
11. ಪೀಟರ್ ವಿಲ್ಸನ್ ಪ್ರಭಾಕರ, 1999, ಮಂಗಳೂರು ಹಂಚು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
12. ಪೌಲ್ ಎಫ್.ಶಿಂದೆ,ರೆವೆ, 2010, ವಾತ್ಸಲ್ಯದ ಒಡಲು(ನಮ್ಮ ಪ್ರೀತಿಯ ಹನ್ನಾ ಸಿಸ್ಟರ್), ಗುಡ್‌ನ್ಯೂಸ್ ಎಜುಕೇಶನ್ ಸೊಸೈಟಿ, ಹುಬ್ಬಳ್ಳಿ
13. ಬೆನೆಟ್ ಜಿ.ಅಮ್ಮನ್ನ, 2005, ಬಿಲ್ಲವರು ಮತ್ತು ಕ್ರೈಸ್ತರು (ಪಾಂಗಳಗುಡ್ಡೆ ಕ್ರೈಸ್ತ ಹಿನ್ನೆಲೆಯಲ್ಲಿ), ಕ್ರಿಸ್ತವಂದನ ಚರ್ಚ್ 150ನೇ ವರ್ಷಾಚರಣೆ ಸಮಿತಿ, ಪಾಂಗಳಗುಡ್ಡೆ, ಉಡುಪಿ
14. ಬೆನೆಟ್ ಜಿ.ಅಮ್ಮನ್ನ, 2014, ಶಿಕ್ಷಣಕ್ಕೆ ವಿದೇಶೀ ಮಿಶನರಿಗಳ ಮತ್ತು ದೇಶೀಯ ಕ್ರೈಸ್ತರ ಕೊಡುಗೆ, ಕರ್ನಾಟಕ ಸದರ್ನ್ ಡಯಾಸಿಸ್ ಎಜುಕೇಶನ್ ಸೊಸೈಟಿ , ಮಂಗಳೂರು
15. ಮಹೀದಾಸ ಬಿ.ವಿ, 1993, ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು
16. ಮುತ್ತಣ್ಣ ಐ.ಮಾ., 1969, 19ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ,
17. ಮ್ಯಾಥ್ಯೂ ಕೆ.ಎಂ., 1994 ರೆವೆ.ಎಫ್.ಕಿಟೆಲ್–ಒಂದು ಸಮಗ್ರ ಅಧ್ಯಯನ, ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ
18. ರಮಾನಾಥ ಕೋಟೆಕಾರ್, 2012, ಬಿಲ್ಲವರು ಮತ್ತು ಬಾಸೆಲ್ ಮಿಶನ್, ಸಾಯಿ ಸುಂದರಿ ಸೇವಾ ಟ್ರಸ್ಟ್, ಮಂಗಳೂರು
19. ವರದರಾಜ ಹುಯಿಲಗೋಳ, 1983, ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ, ಸಿ.ಎಸ್.ಐ, ಮೈಸೂರು ಡಯೋಸಿಸ್, ಧಾರವಾಡ
20. ವಿಜಯಕುಮಾರ್, ರೆವೆ., 2004, ಕರ್ನಾಟಕದಲ್ಲಿ ಪ್ರೊಟೆಸ್ಟಾಂತ ಮಿಷನ್ನುಗಳ ಚರಿತ್ರೆ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು
21. ವಿಲ್ಯಂ ಮಾಡ್ತಾ, 1994, ಫ.ಕಿಟೆಲ್ : ಜೀವನ ಸಾಧನೆ–ಕೋಶ ರಚನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
22. ವಿವೇಕ ರೈ, ಬಿ.ಎ. (ಪ್ರ.ಸಂ) ನಾವಡ ಎ.ವಿ, ಸುಬ್ಬಣ್ಣ ರೈ ಎ.,ವಾಮನ ನಂದಾವರ,ಮಾಧವ ಪೆರಾಜೆ(ಸಂ), 2007, ತುಳು ಸಾಹಿತ್ಯ ಚರಿತ್ರೆ , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
23. ಶ್ರೀನಿವಾಸ ಹಾವನೂರ, 1974(ಮೊ.ಮು), 2000(ಮ.ಮು), ಹೊಸಗನ್ನಡದ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

24. ಸುಮುಖಾನಂದ ಜಲವಳ್ಳಿ, 2000, ಕನ್ನಡ ಸಾಹಿತ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರ ಕೊಡುಗೆ, ಸುಮುಖ ಪ್ರಕಾಶನ, ಕಿನ್ನಿಗೋಳಿ
25. ಸೋಲಿ ಜಾರ್ಜ್, 2012, ಕ್ರೈಸ್ತಗೀತೆಗಳು ಧರ್ಮ ಮತ್ತು ಕನ್ನಡತನ , ಧಾತ್ರಿ ಪುಸ್ತಕ, ಬೆಂಗಳೂರು
26. ಹಿರೇಮಠ ಆರ್.ಸಿ(ಪ್ರ.ಸಂ), ಡಾ.ವಾಮನ ಬೇಂದ್ರೆ ಮತ್ತು ಬಿ.ಟಿ.ದೇಸಾಯಿ (ಸಂ), 1971, ಕನ್ನಡಕ್ಕೆ ಕಿಟೆಲರ ಕೊಡುಗೆ, ಕಿಟೆಲ್ ಕಾಲೇಜು, ಧಾರವಾಡ
27. ಹೆಗಡೆ ಜಿ.ಎಂ, 1994, ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಜೀವನ ಹಾಗೂ ಕೃತಿ ಸಮೀಕ್ಷೆ, ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ

**ಕನ್ನಡಾನುವಾದಗಳು**

28. ಫರ್ತ್ ಸಿ.ಬಿ.(ಮೂಲ), ಮಾರಾ ಎಸ್.ಎ.(ಅನು), 1972, **ಭಾರತೀಯ ಕ್ರೈಸ್ತ ಸಭಾ ಚರಿತ್ರೆಯ ಪ್ರವೇಶಿಕೆ**, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು
29. ರಿಕ್ಟರ್ ಜಿ. ರೆವೆ. (ಆಂಗ್ಲ ಮೂಲ), ಲೋಕೇಶ್ ಕೆ.ಎಂ.(ಅನುವಾದ ಮತ್ತು ಸಂಪಾದನೆ), 2011, **ಕೊಡಗು ಪ್ರಾಂತ್ಯದಲ್ಲಿ ಕಂಡು ಬರುವ ಜಾತಿಗಳು ಮತ್ತು ಬುಡಕಟ್ಟು ಜನಾಂಗಗಳ ವೃತ್ತಾಂತ ಸಂಹಿತೆ**, ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

**ತುಳು**

1. ದುರ್ಗಾಪ್ರವೀಣ ಎಂ.ಎಸ್., ಬೆನೆಟ್ ಜಿ. ಅಮ್ಮನ್ನ, 2014, ತುಳು ವಿಕ್ರಮಾರ್ಕ ಕಥೆ(ಬಾಸೆಲ್ ಮಿಶನರಿಳೆನ ಬೊಳ್ಪುಗು ಬರಂದಿ ಬರವುಲೆಡ್ದ್), ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
2. ಪದ್ಮನಾಭ ಕೇಕುಣ್ಣಾಯ, 1995, ರೆವರೆಂಡ್ ಆಗಸ್ಟ್ ಮೇನರ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
3. ಬೆನೆಟ್ ಜಿ.ಅಮ್ಮನ್ನ, 2011, ಮದಪ್ಪರಾವಂದಿ ವಿದೇಶಿ ತುಳುವೆ:.ಜಾನ್ ಜೇಮ್ಸ್ ಬ್ರಿಗೆಲ್(1832–1887) ಬದ್ಕ್ – ಬರವು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಇಂಗ್ಲಿಷ್**

1. Albrecht Frenz and Scaria Zacharia (Ed.), 1993, Dr. Hermann Gundert and Malayalam Language, Centre for Kerala Studies, Kerala
2. Albrecht Frenz, 1997, Herrmann Moegling- A Biography by Dr. Hermann Gundert, D.C. Book Kottayam
3. Albrecht Frenz and Stefan Frenz (Ed.), 2007, Future in Remembrance, Germany
4. Albrecht Frenz, 2011, A Journey Into Religions - Hermann Mogling (1811-1881) Missionary and Linguist in India, on the Occasion of his 200th Birth Anniversary, Draupadi Verlag Heidelberg.
5. Albrecht Frenz, 2014, George Richter-1829-1913- In South India 1855-1896, In Madikeri 1856-1896-Life and Works in the Context of Colleagues Family and Kodagu Society. Pub. Author
6. Albrecht Frenz, Stuttgart, 2014, George Richter (1829-1913) His work in Kodagu on the Basis of Official Reports. Pub. Author
7. Christine Christvon Wedel and Thomas K. Kuhn (Ed.), 2015, Basel Mission – People, History, Perspectives 1815-2015, Basel
8. Edona E.J. ,1940, 'Economic Condition of the Protestant Christians in Malabar With Special Reference to the Basel Mission Church.' – A Research study, Empire Press, Calicut
9. Frederic Anil Kumar, 2011, 'Symbolism or Idolatry?- An appraisal of the use of symbols in Mission with special reference to the Basel Mission in Karnataka India, between 1834-1964',The Karnataka Theological Research Institute( KATHRI),Balmatta, Mangalore
10. Godwin Shiri(Ed), 1985, Wholeness in Christ , The legacy of the Basel Mission in India, The Karnataka Theological Research Institute( KATHRI), Balmatta, Mangalore
11. JaiPrakash Raghavaiah, 1986, Basel Mission Industries In Malabar and South Canara 1834-1914 A Study of its social and economic impact', Gian Publishing house, New Delhi
12. Jenkins Paul, 1989, Text and Documents- A short History of the Basel Mission, Basel
13. Jenkins Paul, 2011, Guide to the Basel Mission Indian Material in the Mission 21 Archive, KATHRI, Mangalore
14. Kranti Farias,1999, The Christian Impact in South Kanara, Church History Association of India, Mumbai
15. Kurup K.K.N. and John K.J. (Ed.), 1993, Legacy of Basel Mission and Hermann Gundert in Malabar, Gundert Death Centenary Committee, Calicut
16. Martin Tamcke and Gladson Jathanna (Ed.), 2012, Construction of the Other, Identification of the self-German Mission in India, Lit Verlag, Zurich
17. Norman C. Sargant, 1987, From Missions to Church in Karnataka(1920-1950), Christian Literature Service, Madras
18. Reinhard Wendt (Ed.), 2006, An Indian to the Indians?- One the initial Failure and Posthumous success of Missionary Ferdinand Kittel (1832-1903), Harrassowitz verlag, Wiesbaden
19. Upadhyaya U.P., 1996, Coastal Karnataka, R.G.Pai Research Centre, Udupi
20. Vijayakumara,2005,Ecumenical Corporation of Missions in Karnataka –A Historical Analysis of the Evangelical Strategy of the Missions 1834-1988, I.S.P.C.K, Delhi
21. William Madtha, Hydrun Brukner, Murigeppa A. and Maheshwaraiah H.M. (Ed), 1998, A Dictionary with a Mission- Paper of the International Conference on the Occasion of the Centenary Celebratiions of Kittel's Kannada –English Dictionary, KATHRI Mangalore for Karnataka University, Dharwad and Tuubingen University, Germany
22. --------------,1955 (First Edition)2007(Reprint), Karnataka Darshana, Department of Kannada and Culture, Govt.of Karnataka, Bangalore

**ಸ್ಮರಣ ಸಂಚಿಕೆಗಳು– ಅಭಿನಂದನ ಸಂಪುಟಗಳು**

1. ಕೊನೆಸಾಗರ ಡಿ.ಟಿ. ಎಸ್.ಎಸ್.ಸಕ್ಕರಿ(ಪ್ರ.ಸಂ), ಐ.ಎಸ್.ಮಳೇಕರ, ವಿಲ್ಸನ್ ಮೈಲಿ, ಧನರಾಜ ತುಡನೆ,

ಸಂತೋಷ್ ನಂದಿಹಾಳ(ಸಂ), 2009,ಬಾಸೆಲ್ ಮಿಶನ್ 175, ಹೆಬಿಕ್ ಸ್ಮಾರಕ ಸಭೆ, ಧಾರವಾಡ

2. ಜಯವಂತ ಎಮ್ ಜೋಗುಳ, ರೆವೆ., 1987, ಬಾಸೆಲ್ ಮಿಶನ್(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ), ಧಾರವಾಡದ ಹೆಬಿಕ್ ಮೆಮೊರಿಯಲ್ ಚರ್ಚ್‌ನ 150 ವರ್ಷಗಳ(1836–86) ನೆನಪಿನ ಸಂಚಿಕೆ
3. ನಾ.ದಾಮೋದರ ಶೆಟ್ಟಿ(ಪ್ರ.ಸಂ), ಸತ್ಯನಾರಾಯಣ ಮಲ್ಲಿಪಟ್ಟಣ (ಸ.ಸಂ), 2003, ಹೊಂಬಿದಿರು, ಸ್ವಾಗತ ಸಮಿತಿ, ಅಖಿಲ ಭಾರತ 71ನೆಯ ಸಾಹಿತ್ಯ ಸಮ್ಮೇಳನ, ಮೂಡಬಿದಿರೆ
4. ಪಮೊದ್ ಗೊಣಿ ರೆವೆ.(ಸಂ), 2016, ಮಿಶನ್ ಕೇರ್ಸ್ 2016, ಯು.ಬಿ.ಎಂ. ಡಿಸ್ಟ್ರಿಕ್ಟ್ ಚರ್ಚ್ ಬೋರ್ಡ್ ಆಂಡ್ ಚರ್ಚ್ ಅಸೋಸಿಯೇಷನ್(ಉಡುಪಿ, ಎಸ್.ಕೆ ಆಂಡ್ ಕೂರ್ಗ್), ಉಡುಪಿ
5. ಪಾಲ್ ಎಂ.ಆರ್.ಟಿ.(ಸಂ),1991,ಸೊವನೇರ್, ಕೆ.ಎಸ್.ಡಿ.ಸಿ.ಎಸ್.ಐ.,ಮಂಗಳೂರು
6. ಪುರುಷೋತ್ತಮ ಬಿಳಿಮಲೆ ಮತ್ತು ಎ.ವಿ.ನಾವಡ (ಸಂ), 1995, ಸಿರಿ, ಶ್ರೀ ಅಮೃತ ಸೋಮೇಶ್ವರ ಅಭಿನಂದನ ಸಂಪುಟ, ಕಲಾಗಂಗೋತ್ರಿ, ಮಂಗಳೂರು
7. ಮುಕುಂದ ಪ್ರಭು ಎಂ.(ಪ್ರ.ಸಂ), 2000, ಪೊಲಿ–ಕೆನರಾ 200 ಸಂದರ್ಭದ ನೆನಪಿನ ಸಂಪುಟ, ಜಿಲ್ಲಾಧಿಕಾರಿ, ದ.ಕ.ಜಿಲ್ಲೆ, ಮಂಗಳೂರು
8. ಲೆನಿನ್ ಅಮ್ಮನ್ನ(ಸಂ), 2014,ಶಿಕ್ಷಣ ಸೇವೆಯ ದ್ವಿಶತಮಾನದತ್ತ ಬೆಳಕಿನ ಹೆಜ್ಜೆ , ಕರ್ನಾಟಕ ದಕ್ಷಿಣ ಸಭಾಪ್ರಾಂತ ಶಿಕ್ಷಣ ಸಂಘ(ರಿ) ಬಲ್ಮಠ, ಮಂಗಳೂರು
9. ವಾಮನ ನಂದಾವರ (ಪ್ರ.ಸಂ), 2009, ಕಲೆಂಬಿ,ವಿಶ್ವ ತುಳು ಸಮ್ಮೇಳನ ನೆಂಪು ಸಂಚಿ 2009
10. ವಾಮನ ನಂದಾವರ (ಪ್ರ.ಸಂ), 2009, ಕೊಡಿಪು, ವಿಶ್ವ ತುಳು ಸಮ್ಮೇಳನ ನೆಂಪು ಸಂಚಿ 2009
11. ಸಾಗರ್ ಸುಂದರ್ ರಾಜ್ ರೆವೆ.ಕೆ.(ಸಂ), 2015,ಬಾಸೆಲ್ ಮಿಶ್ಶನ್ ದ್ವಿಶತಮಾನೋತ್ಸವ 1815–2015, ಚರ್ಚ್ ಆಫ್ ಸೌತ್ ಇಂಡಿಯಾ– ಕರ್ನಾಟಕ ಸದರ್ನ್ ಡಯೊಸಿಸ್
12. ಸೋನ್ಸ್ ಐ.ಎ. ರೆವೆ.(ಸಂ),1962,ಯುಬಿಎಂ ಬಲ್ಮಠ ಶಾಂತಿ ಚರ್ಚ್ ಸಂಟೆನೆರಿ ಸೊವನೇರ್ 1862–1962,ಶಾಂತಿ ಚರ್ಚ್, ಬಲ್ಮಠ
13. ––––––––––,1977,ಸುದರ್ಶನ, ತೋನ್ಸೆ ಮಾಧವ ಅನಂತ ಪೈ ಅಭಿನಂದನ ಗ್ರಂಥ, ವಿಜಯ ಕಾಲೇಜು ಮುಲ್ಕಿ
14. ––––––––––––––––, 1998, Vidyanidhi Souvenir in Commemoration of B.E.M. High School, Mangalore

**ಇಂಗ್ಲಿಷ್**

1. Konesagar D.T. (Ed.), 2004, Bird's –Eye View of the Karnataka Northern Diocese, Karnataka Northern Diocese, Dharwad

**ಅಪ್ರಕಟಿತ ಎಂ.ಫಿಲ್, ಪಿಎಚ್.ಡಿ ಸಂಪ್ರಬಂಧಗಳು**

1. Celine Vas,2008, 'Contribution of Christian Missionaries to Journalism in Karnataka', PhD Thesis, Dept. of Journalism Mangalore University Mangalore
2. Dennis Fernandis, 2006, 'Tulu World In European Writings', PhD Thesis, Dept. of History , Mangalore University Mangalore
3. Fedrick Sunil Kumar N.I, 2006, 'The Basel Mission and Social Change-Malabar and South Canara A Case Study (1830-1956)' Ph.D. Thesis. Department of History, University of Calicut,
4. Padmashree B.,2004, 'Basel Mission and Education In South Kanara District 1834-1947', M.Phil Dissertation Dept. of History, Madurai Kamaraj Univers ary
5. Peter Wilson Prabhakar, 1988, The Basel Mission in South Kanara (1834-1947), PhD Dissertation, Dept. of History , Mangalore University Mangalore
6. ಅಶೋಕ್ ರಾಕೇಶ್ ಡಿಸೋಜ, ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್, ಪಿ.ಎಚ್.ಡಿ. ಪ್ರಬಂಧ, ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ಅಂಗಡಿ ಎಸ್. ಎಸ್., 2000, ಮಿಷನರಿಗಳ ದ್ವಿಭಾಷಿಕ ನಿಘಂಟುಗಳು– ತೌಲನಿಕ ಅಧ್ಯಯನ, ಪಿ.ಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ
8. ಉಷಾರಾಣಿ,2002, ಹೆರ್ಮನ್ ಮ್ಯೋಗ್ಲಿಂಗ್ ಸಂಕಲಿಸಿದ ದಾಸರ ಪದಗಳು–ಒಂದು ಅಧ್ಯಯನ, ಎಂ.ಫಿಲ್. ಸಂಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ
9. ಡೇವಿಡ್ ಟಿ.ಪುನೀತ್,2008 'ಕನ್ನಡ ಬೈಬಲ್ ಒಂದು ಅಧ್ಯಯನ',ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ
10. ನೋರ್ಬರ್ಟ್ ಮಸ್ಕರೇಹ್ನಸ್, ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಬದಲಾವಣೆಯಲ್ಲಿ ಕ್ರೈಸ್ತ ಸಂಸ್ಥೆಗಳ ಪಾತ್ರ (1834–2008) ಪಿ.ಎಚ್.ಡಿ. ಪ್ರಬಂಧ, ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
11. ಪ್ರೇಮಲತಾ ಕೋಟೆ,2014, ಪ್ರೊಟೆಸ್ಟಾಂಟ್ ಮಿಶನರಿಗಳ ಧಾರ್ಮಿಕ ಸಾಹಿತ್ಯ, ಸ್ವರೂಪ ಮತ್ತು ವೈಶಿಷ್ಟ, ಪಿ.ಎಚ್.ಡಿ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
12. ಸೌಮ್ಯ ಆನಂದಿ ಕೋಟ್ಯಾನ್, 2010, ಕನ್ನಡಕ್ಕೆ ಹೆರ್ಮನ್ ಮ್ಯೋಗ್ಲಿಂಗರ ಕೊಡುಗೆ, ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ